'ನಿನ್ನ ಲಗೇಜ್ ಎಲ್ಲಿದೆ?'

'ಅದು ಏರ್‌ಪೋರ್ಟಿನಲ್ಲೇ ಇದೆ.'

'ಹೌದಲ್ವೇ? ಮರೆತೇ ಹೋಯ್ತು ನೋಡು! ನೀನು ನನ್ನನ್ನು ಕ್ಲಬ್ಬಿಗೆ ಬಿಡುವುದಾದರೆ ತಯಾರಾಗುವುದು ಒಳ್ಳೆಯದಲ್ವೇ? ಏನಂತಿಯಾ?'

'ಹೌ... ಹೌದು ಡಿಯರ್...' ಅವಳ ದೃಷ್ಟಿ ಗಡಿಯಾರದ ಮೇಲಿತ್ತು.

'ನೀನು ಕಾರು ಹತ್ತು. ನಾನು ಈಗ ಬಂದ್ಬಿಟ್ಟೆ.' ಎಂದು ಹೇಳುತ್ತಾ ಮಿಸ್ಟರ್ ಫೋಸ್ಟರ್ ಒಳಗೆ ಹೋದರು. ಮಿಸೆಸ್ ಫೋಸ್ಟರ್ ವೇಗವಾಗಿ ಹೆಜ್ಜೆಗಳನ್ನಿಡುತ್ತಾ ಕಾರು ಹತ್ತಿ ಕುಳಿತುಕೊಂಡು, 'ಗಂಟೆ ಎಷ್ಟಾಯ್ತು?' ಎಂದು ಡ್ರೈವರನನ್ನು ಕೇಳಿದಳು.

'ಒಂಬತ್ತು ಕಾಲು ಮೇಡಂ.' ಅವನು ಉತ್ತರಿಸಿದ

ಐದು ನಿಮಿಷಗಳ ನಂತರ ಮಿಸ್ಟರ್ ಫೋಸ್ಟರ್ ಮೆಟ್ಟಿಲಿಳಿಯತೊಡಗಿದರು. ಮಿಸೆಸ್ ಫೋಸ್ಟರಳಿಗೆ ಅವರ ಪ್ಯಾಂಟಿನೊಳಗಿನಿಂದ ಅವರ ಸಪೂರ ಕಾಲುಗಳು ಕುರಿಯ ಕಾಲುಗಳಂತೆ ಕಾಣತೊಡಗಿದವು. ಹಿಂದಿನ ದಿನದಂತೆಯೇ ಅವರು ಮಧ್ಯದಲ್ಲೇ ನಿಂತರು. ಆಕಾಶ ನೋಡುತ್ತಾ, ಹವಾಮಾನ ತಜ್ಞನಂತೆ ಗಾಳಿಯನ್ನು ಮೂಸತೊಡಗಿದರು. ಮಂಜು ಪೂರ್ತಿಯಾಗಿ ತಿಳಿಯಾಗಿರಲಿಲ್ಲವಾದರೂ, ಸೂರ್ಯನ ಕಿರಣಗಳು ತೀಕ್ಷ್ಣವಾಗುತ್ತಿದ್ದವು.

'ಇವತ್ತು ನಿನ್ನ ಅದೃಷ್ಟ ಚೆನ್ನಾಗಿರುವಂತಿದೆ.' ಎನ್ನುತ್ತಾ ಕಾರು ಹತ್ತಿ ಅವಳ ಪಕ್ಕದಲ್ಲಿ ಕುಳಿತುಕೊಂಡರು.

'ಡ್ರೈವರ್, ಇನ್ನು ನಿಧಾನಿಸುವುದು ಬೇಡ. ಈ ರಗ್ಗಿನ ಬಗ್ಗೆ ನೀನು ತಲೆಕೆಡಿಸಿಕೊಳ್ಳಬೇಡ, ನಾನು ನೋಡಿಕೊಳ್ಳುತ್ತೇನೆ.' ಅವಳ ಮೇಲೆ ರಗ್ಗನ್ನು ಹೊದಿಸುತ್ತಿದ್ದ ಡ್ರೈವರನಿಗೆ ಆಕೆ ಅವಸರಿಸಿದಳು. ಡ್ರೈವರ್ ಕಾರನ್ನು ಸ್ಟಾರ್ಟ್ ಮಾಡಿದ.

'ಡ್ರೈವರ್, ಒಂದ್ನಿಮಿಷ!' ಮಿಸ್ಟರ್ ಫೋಸ್ಟರ್ ಅವನನ್ನು ತಡೆದರು.

'ಏನಾಯ್ತು ಡಿಯರ್?' ಕೋಟಿನೊಳಗೆ ತಡಕಾಡುತ್ತಿದ್ದ ಮಿಸ್ಟರ್ ಫೋಸ್ಟರರನ್ನು ಆಕೆ ಆತಂಕದಿಂದ ಕೇಳಿದಳು.

'ಎಲೆನಾಳಿಗೊಂದು ಪುಟ್ಟ ಕಾಣಿಕೆಯನ್ನು ಖರೀದಿಸಿದ್ದೆ. ಕೈಯಲ್ಲೇ ಇತ್ತು. ಈಗ ಕಾಣುತ್ತಿಲ್ಲವಲ್ಲ?' ಅವರು ಹೇಳಿದರು.

'ಅದೆಂತಾ ಕಾಣಿಕೆ? ನೀವು ಮನೆಯಿಂದ ಬರುತ್ತಿರುವಾಗ ನನಗೇನೂ ಕಾಣಿಸಲಿಲ್ಲ?'

'ಬಿಳಿ ಕಾಗದದಲ್ಲಿ ಪ್ಯಾಕ್ ಮಾಡಿದ್ದ ಪುಟ್ಟ ಡಬ್ಬಿ. ನಿನಗೆ ನಿನ್ನೆಯೇ ಕೊಡಲು ಮರೆತಿದ್ದೆ.'

'ಪುಟ್ಟ ಡಬ್ಬಿ!' ಮಿಸೆಸ್ ಫೋಸ್ಟರ್ ಸೀಟಿನ ಹಿಂಬದಿಯಲ್ಲಿ ತಡಕಾಡತೊಡಗಿದರು.

'ಸಿಕ್ತಾ ಇಲ್ಲ! ಬೆಡ್‌ರೂಮಲ್ಲೇ ಮರೆತಿರಬೇಕು! ಈಗ ಬಂದೆ.' ಎನ್ನುತ್ತಾ ಮಿಸ್ಟರ್ ಫೋಸ್ಟರ್ ಕಾರಿಂದಿಳಿದು ಮನೆಯ ಕಡೆ ಹೆಜ್ಜೆ ಹಾಕತೊಡಗಿದರು.

**'Oh, God! Please!!'** ಮಿಸೆಸ್ ಫೋಸ್ಟರ್ ಕುಳಿತಲ್ಲಿಂದಲೇ ನರಳಿದರು. 'ಈಗಾಗಲೇ ತಡವಾಗಿದೆ ಡಿಯರ್. ಅದು ಅಲ್ಲೇ ಇರಲಿ, ಅಂಚೆಯಲ್ಲಿ ಕಳುಹಿಸಿದರಾಯ್ತು. ಬಾಚಣಿಗೆ ತಾನೆ? ಅದು ನಿಮ್ಮ ಮಾಮೂಲು ಪ್ರೆಸೆಂಟ್ ಬಿಡಿ.'

'ಬಾಚಣಿಗೆ ಅಂದ್ರೆ ನಿನಗೆ ಅಷ್ಟೊಂದು ತಿರಸ್ಕಾರವೇಕೆ ಹೆಂಗ್ಸೇ?' ಮಿಸ್ಟರ್ ಫೋಸ್ಟರ್ ಸಿಟ್ಟಿಗೆದ್ದರು.

'ಹಾಗಲ್ಲ ಡಿಯರ್...'